ಅನುದಾನದಲ್ಲಿ ನಗರ ವಿಧಾನ ಸಭಾ ಕ್ಷೇತ್ರಗಳನ್ನು ಹೊರತುಪಡಿಸಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ರೂ.52.08ಲಕ್ಷಗಳಂತೆ ಅನುದಾನ ಒದಗಿಸಲಾಗಿದೆ. ಈ ಅನುದಾನಕ್ಕೆ ತಕ್ಕಂತೆ ರೂ.104.16 ಲಕ್ಷಗಳ ಅಂದಾಜು ಮೊತ್ತದ ಕಾಮಗಾರಿಯನ್ನು 1:2 ಅನುಪಾತಕ್ಕೆ ಸೀಮಿತಗೊಳಿಸಿ ಮಂಜೂರಾತಿ ನೀಡಲಾಗಿದೆ. ರಾಜ್ಯದಲ್ಲಿನ ಎಲ್ಲಾ ವಿಭಾಗಗಳಲ್ಲಿ ರೂ.19998.72ಲಕ್ಷಗಳ ಅಂದಾಜು ಮೊತ್ತದ ಕ್ರಿಯಾ ಯೋಜನೆಗೆ ಅನುಮೋದನೆ ನೀಡಿದೆ.

ಆ) ಬೆಂಗಳೂರು ಮಹಾನಗರ ವ್ಯಾಪ್ತಿಯಡಿ ಬರುವ ವಿಧಾನಸಭಾ ಕ್ಷೇತ್ರದಲ್ಲಿನ ರಸ್ತೆಗಳ ಅಭಿವೃದ್ಧಿಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಮೆಟ್ರೊ ಯೋಜನೆಗಳಡಿ ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಒದಗಿಸಲಾಗಿರುವ ಅನುದಾನದಲ್ಲಿ ಪ್ರತ್ಯೇಕವಾಗಿ ಕೈಗೆತ್ತಿಕೊಳ್ಳಲಾಗುತ್ತದೆ. ಈ ಯೋಜನೆಯ ಸೌಲಭ್ಯ ಬೆಂಗಳೂರು ಮಹಾನಗರ ವ್ಯಾಪ್ತಿಯಡಿ ಬರವ ವಿಧಾನಸಭಾ ಕ್ಷೇತ್ರಗಳಿಗೆ ಅನ್ವಯಿಸುವುದಿಲ್ಲ.

ಇ) ಮಹಾನಗರ ಪಾಲಿಕೆ ವ್ಯಾಪ್ತಿಯ ರಸ್ತೆಗಳ ಅಭಿವೃದ್ಧಿಗಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಮೆಟ್ರೊ ಯೋಜನೆಗಳಡಿ ಆಯವ್ಯಯದಲ್ಲಿ ಪ್ರತ್ಯೇಕವಾಗಿ ಅನುದಾನ ಒದಗಿಸಲಾಗಿದೆ.

ಲೋಕೋಪಯೋಗಿ ಇಲಾಖಾವತಿಯಿಂದ ಕಲೆದ ಮೂರು ವರ್ಷಗಳಲ್ಲಿ ಬೆಂಗಳೂರು ಸುತ್ತಮುತ್ತಲಿನ ವಾಹನ ದಟ್ಟಣೆ ನಿಯಂತ್ರಣ ಗೊಳಿಸಲು 1011.36 ಕಿಮೀ ಉದ್ದದ 46 ರಸ್ತೆಗಳನ್ನು ರೂ.999.63ಲಕ್ಷಗಳ ಅಂದಾಜು ಮೊತ್ತದಲ್ಲಿ ಅಭಿವೃದ್ಧಿಪಡಿಸಲಾಗಿದೆ.

ಈ) ಕ್ರಿಯಾ ಯೋಜನೆಯು ಅನುಮೋದನೆಗೊಂಡಿರುತ್ತದೆ. ಅಂದಾಜುಗಳ ಮಂಜೂರಾತಿ ಹಂತದಲ್ಲಿದೆ. ಈಗಾಗಲೇ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ಶೀಘ್ರದಲ್ಲಿ ಗುತ್ತಿಗೆದಾರರನ್ನು ನೇಮಿಸಿ ಯೋಜಿತ ಅವಧಿಯಲ್ಲಿಯೇ ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

1103 ಶ್ರೀ ಹ್ಯಾರೀಸ್ ಎನ್.ಎ. : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ವ್ಯಾಪ್ತಿಯ ಕರಾವಳಿ ಪ್ರದೇಶ ಸುರಕ್ಷತೆಗಾಗಿ ಸರ್ಕಾರ ಕೈಗೊಂಡ ಕ್ರಮಗಳೇನು?

ಆ) ಅನ್ಯರ ಅಕ್ರಮ, ಕಡಲು ಪ್ರದೇಶ, ಭಯೋತ್ಪಾದನೆ ಮತ್ತು ಭೂಗತ ಚಟುವಟಿಕೆಗಳು ಕರಾವಳಿ ವ್ಯಾಪ್ತಿಯಲ್ಲಿ ನಡೆಯದಂತೆ ನೋಡಿಕೊಳ್ಳಲು ಸರ್ಕಾರದ ಕಟ್ಟುನಿಟ್ಟಿನ ಕ್ರಮಗಳೇನು?

ಇ) ಕರಾವಳಿ ಸಂರಕ್ಷಣೆ ಕಾರ್ಯಗಳಲ್ಲಿ ಸ್ಥಳೀಯ ಮೀನುಗಾರರ ಪಾಲ್ಗೊಳ್ಳುವಿಕೆಗೆ ಸರ್ಕಾರ ಯೋಜನೆ ರೂಪಿಸಿದೆಯೇ; ಆ ಕುರಿತ ವಿವರಗಳೇನು?

ಶ್ರೀ ಡಾ: ವಿ.ಎಸ್.ಆಚಾರ್ಯ (ಗೃಹ ಸಚಿವರು) :

ಅ) ಕರ್ನಾಟಕ ರಾಜ್ಯದಲ್ಲಿ ಸುಮಾರು 320 ಕಿ.ಮೀ ವ್ಯಾಪ್ತಿಯುಳ್ಳ ಕರಾವಳಿ ಪ್ರದೇಶದ ಸುರಕ್ಷತೆಗೆ ಎಸ್.ಪಿ, ದರ್ಜೆಯ ಅಧಿಕಾರಿಯ ನೇತೃತ್ವದಲ್ಲಿ ಒಂದು ಕಡಲು ಕಾವಲು ಪೊಲೀಸ್ ಘಟಕವನ್ನು ಸರ್ಕಾರವು ಸ್ಥಾಪಿಸಿದೆ. ಈ ಘಟಕದಲ್ಲಿ ಪ್ರಸ್ತುತ ಐದು ಪೊಲೀಸ್ ಠಾಣೆಗಳನ್ನು ಭಟ್ಕಳ, ಮಲ್ಪೆ, ಕಾರವಾರ, ಮಂಗಳೂರು ಮತ್ತು ಕುಮಟಾಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಕಾಯಾಂರಂಭ ಮಾಡಿದೆ.

For the seurity of Karnataka State coast line of 320 Kms Coastal Security Police has been established with a Superintendent of Police as its head. Five coastal Police Stations in Mangalore, Karwar, Bhatkal, Malpe and Kumta are fully operational.

ಆ) ಅನ್ಯರ ಅಕ್ರಮ, ಕಡಲು ಪ್ರದೇಶ, ಭಯೋತ್ಪಾದನೆ ಮತ್ತು ಭೂಗತ ಚಟುವಟಿಕೆಗಳು ಕರಾವಳಿ ಪ್ರದೇಶದಲ್ಲಿ ನಡೆಯದಂತೆ ಕೈಗೊಂಡ ಕ್ರಮಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

Action taken by the Government to prevent un-authorised entry of Pirates, terrorists and activities of underground elements in the Coastal areas is furnished in the Annexure.

ಇ) ಕರಾವಳಿ ಕಾವಲು ಪೊಲೀಸ್ ಘಟಕದ ಎಲ್ಲಾ 5 ಪೊಲೀಸ್ ಠಾಣೆಗಳ ಪ್ರತಿ ಬೀಟ್ ವ್ಯಾಪ್ತಿಯಲ್ಲಿ ಮೀನುಗಾರರ ಸಮುದಾಯದ ಸುಮಾರು 10 ರಿಂದ 12 ಸದಸ್ಯರಿರುವ ಸಾಗರ ರಕ್ಷಕ ದಳಗಳನ್ನು ರಚಿಸಿ ಪ್ರತಿ ತಿಂಗಳು ಪೊಲೀಸ್ ಅಧಿಕಾರಿಗಳ ನೇತ್ರತ್ವದಲ್ಲಿ ಸಣೆ ನಡೆಸಿ, ಅವರುಗಳಿಂದ ಮಾಹಿತಿ ಸಂಗ್ರಹಿಸುವ ಕಾರ್ಯ ನಡೆಯುತ್ತಿದೆ. ತುರ್ತು ಸಂದರ್ಭದಲ್ಲಿ ತೀರ ಪ್ರದೇಶದ ಮೀನುಗಾರರ ಸಮುದಾಯದವರೊಂದಿಗೆ ಸಮುದ್ರ ಗಸ್ತು, ಮತ್ತು ಇತರೆ ಮಾಹಿತಿಗಳ ವಿಚಾರ ವಿನಿಮಯ ಮಾಡಲಾಗುತ್ತಿದೆ. ಠಾಣಾ ವ್ಯಾಪ್ತಿಯಲ್ಲಿ ನಡೆಯುವ ಸಭೆಗೆ ಪ್ರಮುಖವಾಗಿ ಮೀನುಗಾರರ ಸಮುದಾಯದ ಮುಖಂಡರನ್ನು ಪಾಲ್ಗೊಳ್ಳುವಂತೆ ಕ್ರಮ ಕೈಗೊಳ್ಳಲಾಗುತ್ತಿದೆ.

'Sagar Rakshak' Dal has been formed consisiting of 10-15 local fishermen from the local villages under each police Station.

Regular meetings are being held by officers and fishermen to collect information about the movement of strangers and suspect vessels. Sea patrolling with local fishermen is also being conducted during emergency to collect information. The active participation by the fishermen leaders has been ensured for interaction and to enhance security.

<u>ಅನುಬಂಧ</u>

1) ಕರಾವಳಿ ಪ್ರದೇಶದಲ್ಲಿ ಇಂತಹ ಚಟುವಟಿಕೆಗಳನ್ನು ತಡೆಗಟ್ಟಲು ಒಂದು ಪೂರ್ವ ಪ್ರಮಾಣದ ಕರಾವಳಿ ಕಾವಲು ಪೊಲೀಸ್ ಘಟಕವನ್ನು 329 ಸಿಬ್ಬಂದಿಗಳ ಬಲದೊಂದಿಗೆ ಸ್ಥಾಪಿಸಲಾಗಿದೆ.
2) ಈ ಘಟಕದಲ್ಲಿ ಪ್ರಸ್ತುತ ಐದು ಕರಾವಳಿ ಕಾವಲು ಪೊಲೀಸ್ ಠಾಣೆಗಳು ಮಂಗಳೂರು, ಕಾರವಾರ, ಮಲ್ಪೆ, ಭಟ್ಕಳ ಮತ್ತು ಕುಮಟಾದಲ್ಲಿ ಪೂರ್ಣ ಪ್ರಮಾಣದಲ್ಲಿ ಕಾರ್ಯಾರಂಭ ಮಾಡಿದೆ.
3) ಪ್ರಸ್ತುತ ಈ ಪಡೆಗೆ ಕೇಂದ್ರ ಸರ್ಕಾರದ ಗೃಹ ಮಂತ್ರಾಲಯದ ಆದೇಶದನ್ವಯ ಒಂದು 12 ಟನ್ ಸಾಮರ್ಥ್ಯದ ಬೋಟ್ ಮತ್ತು 1 ಐದು ಟನ್ ಸಾಮರ್ಥ್ಯದ ಬೋಟ್‌ಗಳನ್ನು ಒದಗಿಸಲಾಗಿದ್ದು, ಅವು ಈಗ ಮಂಗಳೂರು ಮರತ್ತು ಕಾರವಾರದ ತೀರ ಪ್ರದೇಶದಲ್ಲಿ ಕಾಯಾರಂಭ ಮಾಡಿದೆ. ಇನ್ನುಳಿದ 12 ಟನ್ ಸಾಮರ್ಥ್ಯದ 9 ಬೋಟ್‌ಗಳು ಮತ್ತು 5 ಟನ್ ಸಾಮರ್ಥ್ಯದ 4 ಬೋಟ್‌ಗಳನ್ನು ಹನ್ನೆರಡು ತಿಂಗಳೊಳಗಾಗಿ ಒದಗಿಸಲಾಗುತ್ತದೆ.
4) ಈ ಕರಾವಳಿ ಕಾವಲು ಪಡೆಯು ನೌಕಾಪಡೆ, ಕೋಸ್ಟ್‌ಗಾರ್ಡ್, ಕಸ್ಟಂಮ್ಸ್, ಅರಣ್ಯ ಇಲಾಖೆ, ಮೀನುಗಾರಿಕೆ ಇಲಾಖೆಯೊಂದಿಗೆ ಸಮನ್ವಯ ಯಾವುದೇ ರೀತಿಯ ಅಕ್ರಮ ಚಟುವಟಿಕೆ ಮತ್ತು ಭಯೋತ್ಪಾದನಾ ಚಟುವಟಿಕೆ ನಡೆಯದಂತೆ ಕ್ರಮ ಕೈಗೊಂಡಿರುತ್ತದೆ.
5) ಕೋಸ್ಟ್‌ಗಾರ್ಡ್‌ನೊಂದಿಗೆ ಮಂಗಳೂರಿನಲ್ಲಿ ಪ್ರತಿ ತಿಂಗಳು ನಡೆಯುವ ಮಾಸಿಕ ಗುಪ್ತ ಮಾಹಿತಿ ವಿನಿಮಯ ಸಭೆಗಳಲ್ಲಿ ಭಾಗವಹಿಸಿ ದೊರೆತ ಮಾಹಿತಿಗಳ ಮೇಲೆ ಸೂಕ್ತ ಕ್ರಮಕೈಗೊಳ್ಳುವುದು.
6) ತೀರ ಪ್ರದೇಶದಲ್ಲಿ ನಡೆಯುವ ಅಪರಾಧ ಕೃತ್ಯಗಳನ್ನು, ಭಯೋತ್ಪಾದನೆ ಕೃತ್ಯಗಳನ್ನು ತಡೆಗಟ್ಟಿ, ಸ್ಥಳೀಯ ನಿವಾಸಿಗಳಿಗೆ ಮತ್ತು ವ್ಯಾಪಾರಿಗಳಿಗೆ ಸೂಕ್ತ ರಕ್ಷಣೆಯನ್ನು ನೀಡುವ ಕಾರ್ಯ ಮಾಡುತ್ತಿದೆ.

7) ಪ್ರವಾಹದ ಸಮಯದಲ್ಲಿ, ಸೈಕ್ಲೋನ್ ಸಮಯದಲ್ಲಿ ಮತ್ತು ಸಮುದ್ರದಲ್ಲಿ ಹಡಗು ಮುಳುಗಿದ ಸಮಯದಲ್ಲಿ ಜಿಲ್ಲಾಡಳಿತದೊಂದಿಗೆ ಸಮನ್ವಯ ಸಾಧಿಸಿ, ಪರಿಹಾರ ಕಾರ್ಯಕ್ರಮದಡಿಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದು ಇತ್ಯಾದಿ.

752 ಶ್ರೀ ಖಾದರ್ ಯು.ಟಿ. : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ರಸ್ತೆಗಳಲ್ಲಿ ಸುಂಕ ವಸೂಲಿ (Toll Gate) ಮಾಡುತ್ತಿರುವ ಕೇಂದ್ರಗಳ ಸಂಖ್ಯೆ ಎಷ್ಟು?

ಆ) ಈ ಪೈಕಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಸುಂಕ ವಸೂಲಿ (Toll Gate) ಗಳಿವೆ (ವಿವರ ನೀಡುವುದು)?

ಇ) ಇನ್ನೂ ಹೆಚ್ಚು ಸುಂಕ ವಸೂಲಿ (Toll Gate) ಗಳನ್ನು ಪ್ರಾರಂಭಿಸಲು ಸರ್ಕಾರ ಉದ್ದೇಶಿಸಿದೆ (ವಿವರ ನೀಡುವುದು)?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಒಟ್ಟು 13.

ಆ) ದಕ್ಷಿಣ ಕನ್ನಡ ಜಿಲ್ಲೆಯ, ಪಾಣಿ–ಮಂಗಳೂರು ಬಳಿ ರಾಷ್ಟ್ರೀಯ ಹೆದ್ದಾರಿ–48ರ ಕಿಮೀ. 327.00ರಲ್ಲಿ ನೇತ್ರಾವತಿ ಸೇತುವೆಗೆ ಒಂದು ಸುಂಕ ವಸೂಲಿ ಮಾಡುವ ಕೇಂದ್ರವಿದೆ.

ಇ) ರಾಷ್ಟ್ರೀಯ ಹೆದ್ದಾರಿಯ ಮೇಲೆ ಹೊಸದಾಗಿ ಬೃಹತ್ ಸೇತುವೆ ಮತ್ತು 4:6 ಪಥದ ರಸ್ತೆ ನಿರ್ಮಾಣ ಮಾಡಿದಲ್ಲಿ ಸುಂಕ ವಸೂಲಿ ಮಾಡುವ ಕೇಂದ್ರಗಳನ್ನು ನಿರ್ಮಿಸಲಾಗುವುದು.

752 Sri. Khadar U.T. : Hon'ble Minister for public works kindly answer to the below question?

a) At how many Toll Gates the State is collecting toll fees on Roads;

b) Out of these how many Toll Gates are located in Dakshina Kannada District;

c) Is there any proposal by the government to install more number of toll gates to collect fee? (Details to be furnished);